ಸ) ಕರ್ನಾಟಕದ ಸಣ್ಣ ಉದ್ದಿಮೆ ಸಂಸ್ಥೆಗಳು.

ಬಿಡಿ ಭಾಗಗಳನ್ನು ವಾಹನ ತಯಾರಕರ ಬೆಲೆ ಪಟ್ಟಿ ಮಂತ್ರ ಅಥವಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಾ ಸದಸ್ಯರಾಗಿರುವ ರಾಜ್ಯ ಸಾರಿಗೆ ಸಂಸ್ಥೆ ನಿಗಮಗಳ ಒಕ್ಕೂಟದ ಸ್ಥಾಯಿ ಸಮಿತಿ ಯವರು ನಿಗದಿಪಡಿಸಿದ ಕ್ರಯ ಒಪ್ಪಂದಗಳ ಆಧಾರದ ಮೇಲೆ ಖರೀದಿಸಲಾಗುತ್ತದೆ.

## ಬೆಂಗಳೂರಿಗೆ ಶಿಂಷಾ ಮೂಲದಿಂದ ನೀರು ಸರಬರಾಜು ಮಾಡುವ ಬಗ್ಗೆ.

೧೯೪೪. ಶ್ರೀ ಗೋಪಾಲ ಪಂಡಿತ್ ಕಾನಡೆ (ಸಿರ್ಸಿ).— ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರಕ್ಕೆ ಶಿಂಷಾ ಮೂಲದಿಂದ ನೀರನ್ನು ತರಲು ಕಾವೇರಿ ಕೆಲಸಗಳು ನಡೆಯುತ್ತಿರುವುದು ನಿಜವೇ ?

ಆ) ಸದರಿ ಶಿಂಷಾ ಮೂಲದ ಬಳಿ ಕುಣಿಗಲ್ ಹತ್ತಿರ ಕಾಗದ ಕಾರ್ಖಾನೆಯು ಕಲ್ಮಷವನ್ನು ಹೊರಬಿಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು).—

ಅ) ಹೌದು.

ಆ) ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ ಕಾರ್ಖಾನೆಯು ಶಿಂಷಾ ಮೂಲದ ಬಳಿ: ಕುಣಿಗಲ್ ಹತ್ತಿರ ಹೊಸದಾಗಿ ಪ್ರಾರಂಭವಾಗಿದ್ದು ಸದರಿ ಕಾರ್ಖಾನೆಯು ಮಲಿನ ನೀರನ್ನು ನದಿಗೆ ಬಿಡುತ್ತಿಲ್ಲ ಮತ್ತು ಅವಶ್ಯಕ ಮಲಿನ ನೀರಿನ ಸಂಸ್ಕರಣ ಘಟಕಗಳನ್ನು ಅಳವಡಿಸಿದೆ. ಈ ಮಲಿನ ನೀರನ್ನು ನದಿಗೆ ಬಿಡಲು ಯೋಗ್ಯವಾದ ಗುಣಮಟ್ಟಕ್ಕೆ ಹೊಂದುವಂತೆ ಸಂಸ್ಕರಿಸಿ ಅದನ್ನು ವ್ಯವಸಾಯಕ್ಕೆ ಉಪಯೋಗಿಸುವಂತೆ ನಿರ್ದೇಶಿಸಿದ ಪ್ರಕಾರ ೩೦ ಎಕರೆ ಜಮೀನಿನಲ್ಲಿ ತೋಟಗಾರಿಕೆಗಾಗಿ ಉಪಯೋಗಿಸುತ್ತಿದೆ. ಯಾವುದೇ ರೀತಿಯಲ್ಲಿ ಮಲಿನ ನೀರು ನದಿಯನ್ನು ಸೇರದಂತೆ ತಡೆಗಟ್ಟಲು ಪಂಚ್ಲೈನ ದಂಡೆಗಳನ್ನು ಕಟ್ಟಲು ಕಾರ್ಖಾನೆಯು ಕಾರ್ಯವನ್ನು ಕೈಗೊಳ್ಳುತ್ತಿದೆ.

ಇ) ಈ ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

## ವೀರಾಜಪೇಟೆ ಕ್ಷೇತ್ರದಲ್ಲಿ ಕೈಗಾರಿಕಾ ಘಟಕ ಸ್ಥಾಪಿಸುವ ಬಗ್ಗೆ.

೧೯೬೧. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ),— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿರಾಜಪೇಟೆ ಕ್ಷೇತ್ರದಲ್ಲಿ ಕೈಗಾರಿಕಾ ಅಭಿವೃದ್ಧಿ ಪ್ರದೇಶಕ್ಕಾಗಿ ನಿವೇಶನ ಗೊತ್ತುಪಡಿಸಿರುವುದು ನಿಜವೇ ?

ಆ) ಸದರಿ ಕ್ಷೇತ್ರದಲ್ಲಿ ಕೈಗಾರಿಕಾ ಘಟಕವೇನಾದರೂ ಸ್ಥಾಪಿಸುವ ಯೋಜನೆ ಸರ್ಕಾರದವ ರಲ್ಲಿದೆಯೇ ?

ಇ) ಸದರಿ ಕ್ಷೇತ್ರಕ್ಕೆ ಅನುಕೂಲ ಹಾಗೂ ಸರಿಹೊಂದುವ ಕೈಗಾರಿಕಾ ಘಟಕ ಸ್ಥಾಪನೆ ಬಗ್ಗೆ ಅಧ್ಯಯನ ಮಾಡಲು ಕ್ರಮವೇನಾದರೂ ಕೈಗೊಳ್ಳಲಾಗಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಹೌದು,